ಹೊಡೆಸುತ್ತಿದ್ದೇವೆ. ಮಾನ್ಯ ಸದಸ್ಯರು 'ಸೋಲಾರ್ ತಂತಿ'ಯನ್ನು ಹಾಕಿಸಬೇಕೆಂದು ಹೇಳಿದ್ದಾರೆ. ಈಗಾಗಲೇ ಕೆಲವು ಕಡೆಯಲ್ಲಿ 'ಸೋಲಾರ್ ತಂತಿ' ಯನ್ನು ಹಾಕಿಸಿದ್ದೆವು. ಆದರೆ ಜನಗಳು ಅದನ್ನು ಕಟ್ ಮಾಡಿ ದನಗಳನ್ನು ಬಿಡುತ್ತಿದ್ದಾರೆ. ಅದಕ್ಕೋಸ್ಕರ ಟ್ರೆಂಚ್ ಹಾಕಿಸಬೇಕು, ಇದಕ್ಕೆ ಹೆಚ್ಚು ಖರ್ಚಾಗುತ್ತದೆ. ಆದರೂ ಕೂಡ ಈಗಾಗಲೇ 256 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈಗ ಎಲ್ಲಿ ಆನೆಗಳ ಹಾವಳಿ ಜಾಸ್ತಿ ಇದೆಯೋ ಅಲ್ಲಿ ಟ್ರೆಂಚ್ ಹೊಡೆಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಜೊತೆಗೆ ಸೋಲಾರ್ ತಂತಿಯನ್ನು ಹಾಕಬೇಕು. ರೈತರುಗಳೇ ಸ್ವತಃ ಸೋಲಾರ್ ತಂತಿಯನ್ನು ಹಾಕಿಸಿಕೊಂಡರೆ ಅದಕ್ಕೆ ಸಬ್ಸಿಡಿ ಕೊಡುವ ಬಗ್ಗೆ ಯೋಚನೆಯನ್ನು ಮಾಡಲಾಗುವುದು. ಒಟ್ಟಿನಲ್ಲಿ ಆನೆಗಳ ಹಾವಳಿಯನ್ನು ನಿಯಂತ್ರಣ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

(ಆ) ಘಟಪ್ರಭಾ ಸಕ್ಕರೆ ಕಾರ್ಖಾನೆಯಲ್ಲಿ ಆದಂಥ ವ್ಯವಹಾರಗಳು.

ಶ್ರೀ ವಿ.ಎಸ್.ಕೌಜಲಗಿ (ಅರೆಭಾವಿ): ಮಾನ್ಯ ಉಪಾಧ್ಯಕ್ಷರೆ, ಘಟಪ್ರಭಾ ಸಕ್ಕರೆ ಕಾರ್ಖಾನೆಯಲ್ಲಿ ಆಗಿರುವಂಥ ವ್ಯವಹಾರಗಳ ಬಗ್ಗೆ ಸಕ್ಕರೆ ಮಂತ್ರಿಗಳಿಗೆ ಉತ್ತರಿಸಲು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಘಟಪ್ರಭಾ ಸಹಕಾರ ಸಕ್ಕರೆ ಕಂಪನಿಯ ಆಡಳಿತ ಮಂಡಳಿಯು ಕಾರ್ಖಾನೆಯಲ್ಲಿ ಕಬ್ಬನ್ನು ಅರೆಯುವ ಸಾಮರ್ಥ್ಯವನ್ನು 1250 ಡಿ.ಸಿ.ಯಿಂದ 3500 ಡಿ.ಸಿ.ಗೆ ವಿಸ್ತರಿಸಲು 1991ರಲ್ಲಿ ತೀರ್ಮಾನವನ್ನು ತೆಗೆದುಕೊಂಡಿತು. ತದನಂತರ ಕೇಂದ್ರ ಸರ್ಕಾರ 11-7-96 ರಂದು ಸದರಿ ಸಾಮರ್ಥ್ಯದ ವಿಸ್ತರಣೆಗಾಗಿ ಅನುಮತಿ ಪತ್ರವನ್ನು ನೀಡಿರುತ್ತದೆ. ಇದಕ್ಕೆ ತಗಲುವ ಅಂದಾಜು ವೆಚ್ಚ 45 ಸಾವಿರ ಲಕ್ಷಗಳಾಗಿರುತ್ತದೆ. ಈ ವೆಚ್ಚವನ್ನು ಈ ಕೆಳಕಂಡಂತೆ ಭರಿಸಲು ಉದ್ದೇಶಿಸಲಾಗಿತ್ತು. ಎಸ್.ಸಿ.ಡಿ.ಸಿಯಿಂದ 2,490 ಲಕ್ಷಗಳು, ಹೆಚ್.ಡಿ.ಎಫ್.ನಿಂದ 1,090 ಲಕ್ಷಗಳು, ಕಾರ್ಖಾನೆಯ ಸ್ವಂತ ಬಂಡವಾಳದಿಂದ 920 ಲಕ್ಷ ರೂಪಾಯಿಗಳು. ಈ ರೀತಿ 450 ಲಕ್ಷ ರೂಪಾಯಿಗಳನ್ನು ಭರಿಸಲು ತೀರ್ಮಾನವಾಗಿತ್ತು. ಮೇಲ್ಕಂಡ ಯೋಜನೆಯ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರ ತನ್ನ ಪತ್ರದ ಕ್ರಮಾಂಕ ಸಿಎಂಡಬ್ಲ್ಯು 24 ಸಿಯುಎಫ್ 97 ದಿನಾಂಕ 29-3-97ರಲ್ಲಿ ರಾಷ್ಟ್ರೀಯ ಸರದಾರಿ ಅಭಿವೃದ್ಧಿ ನಿಗಮ, ನವದೆಹಲಿ, ಇಲ್ಲಿಗೆ ಪತ್ರ ಬರೆದು ಕಾರ್ಖಾನೆಯು ಕೋರುವ ವೆಚ್ಚವನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಿದೆ. ಇದಕ್ಕೆ ಉತ್ತರವಾಗಿ, ರಾಷ್ಟ್ರೀಯ ಸರ್ದಾರಿ ಅಭಿವೃದ್ಧಿ ನಿಗಮ, ನವದೆಹಲಿ, ಇವರು ದಿನಾಂಕ 16-12-96ರ ಪತ್ರದಲ್ಲಿ ತಿಳಿಸಿದಂತೆ, ಶುಗರ ಪ್ಲಾಂಟನ್ನು 15-5-97ರಲ್ಲಿ ಕರ್ನಾಟಕ ಸಹಕಾರ ಅಪೆಕ್ಸ್ ಬ್ಯಾಂಕಿನಿಂದ ಅವಧಿ ಮೀರಿದ ಹಣ 32 ಕೋಟಿ 69 ಲಕ್ಷ ಉಳಿದಿರುವುದನ್ನು ತಿಳಿಸಿ ಈ ಸಕ್ಕರೆ ಕಾರ್ಖಾನೆಯ ಸಾಲದ

ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಿರುತ್ತಾರೆ. ತದನಂತರ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಸ್ತಾವನೆಯನ್ನು ನವೀಕರಿಸಲು ಸಕ್ಕರೆಕಾರ್ಖಾನೆಗಳು ನಿರ್ದೇಶಕರಿಗೆ ಸೂಚಿಸಲಾಗುವುದು. ಈ ಕಾರ್ಖಾನೆಯ ಸಾಮರ್ಥ್ಯ ವಿಸ್ತರಣಾ ಯೋಜನೆಗೆ ಹಣಕಾಸು ಲಭ್ಯವಾಗಿಲ್ಲವಾದ್ದರಿಂದ ಇದುವರೆಗೆ ಅದನ್ನು ಪ್ರಾರಂಭಿಸಲಾಗಿಲ್ಲ.

ಶ್ರೀ ವಿ.ಎಸ್.ಕೌಜಲಗಿ: 2500 ಟನ್ ಕ್ರಷಿಂಗ್ ಕೆಪ್ಯಾಸಿಟಿಯನ್ನು ಹೆಚ್ಚು ಮಾಡಲು 45 ಕೋಟಿ ರೂಪಾಯಿಯ ಅಂದಾಜು ವೆಚ್ಚ ಮಾಡಿದಿರಿ. ಇದು ಬಹಳ ಅತಿಶಯವಾಗಿದೆ. ಇದರಲ್ಲಿ ಅಂದಾಜಿಗಿಂತ ಸುಮಾರು 20 ಕೋಟಿಯ ಅಂದಾಜನ್ನು ಹೆಚ್ಚು ಮಾಡಲಾಗಿದೆ. ಆದ್ದರಿಂದ ಇದನ್ನು ಪುನಃ ಪರಿಶೀಲನೆ ಮಾಡಬೇಕು. ಏಕೆಂದರೆ ಇದು 20-25 ಕೋಟಿ ರೂಪಾಯಿಯಲ್ಲಿ ಆಗುತ್ತದೆ. ಸುಮಾರು 20 ಕೋಟಿ ರೂಪಾಯಿಗಳನ್ನು ಹೆಚ್ಚು ಕೊಡುವುದರ ಬದಲು ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕು. ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟಿಯ ಉನ್ನತ ಮಟ್ಟದ ಅಧಿಕಾರಿ ಇದನ್ನು ಪರಿಶೀಲನೆ ಮಾಡಲು ಅನುಕೂಲವಾಗುವಂತೆ ಒಂದು ಸಮಿತಿಯನ್ನು ತಾವು ನೇಮಿಸಬೇಕು. ಮೊಲಾಸಿಸ್ ಅನ್ನು ಒಂದು ಟನ್‌ಗೆ ನೂರು ರೂಪಾಯಿಯಂತೆ ಸಾರಾಸಗಟಾಗಿ ಮಾರಿದ್ದೀರಿ. 1996-97ರಲ್ಲಿ ಅದು ಟನ್‌ಗೆ 1,500 ರಿಂದ 3,000 ರೂಪಾಯಿಗಳವರೆಗೆ ಹೋಗಿದೆ. ಹೀಗಾಗಿ ಕಾರ್ಖಾನೆಗೆ ಎರಡು ಕೋಟಿಯಷ್ಟು ನಷ್ಟವಾಗಿದೆ. ಇದನ್ನೂ ಸಹ ಅದರಲ್ಲಿ ಅಳವಡಿಸಿ ಸರಿಯಾದ ವಿಚಾರಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್ ರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಉಮೇಶ್ ವಿ ಕತ್ತಿ: ಹಿರಿಯ ಸದಸ್ಯರಾದ ಮಾನ್ಯ ವಿ.ಎಸ್.ಕೌಜಲಗಿಯವರು ತಂದಿರುವಂಥ ಪ್ರಶ್ನೆಗೆ ಉತ್ತರಿಸಬೇಕಾದರೆ, ಈಗಾಗಲೇ ವಿಸ್ತರಣೆ ಬಗ್ಗೆ ಸವಿಸ್ತಾರ ಮಾಹಿತಿ ಇವೆ. ಆದರೆ ಅಂದಾಜು ವೆಚ್ಚ ಹೆಚ್ಚಾಗಿದೆ ಎಂದು ಏನು ತಿಳಿಸಿದ್ದಾರೆ, ಅದರ ಬಗ್ಗೆ ಮರು ಪರಿಶೀಲನೆ ನಡೆಸಲು ಕೂಡಲೇ ಆದೇಶ ಹೊರಡಿಸುವುದರ ಜೊತೆಗೆ ಮೊಲಾಸಿಸ್‌ನಲ್ಲಿ ಅವ್ಯವಹಾರವಾಗಿದ್ದರೆ ಅದರ ಬಗ್ಗೆಯೂ ಸಹ ಕೂಡಲೇ ವಿಚಾರಣೆ ನಡೆಸಿ ತಮಗೆ ತಿಳಿಸಲಾಗುವುದು ಎಂದು ಮಾನ್ಯ ಸದಸ್ಯರಿಗೆ ತಮ್ಮ ಮುಖೇನ ತಿಳಿಸಲು ಇಚ್ಛಿಸುತ್ತೇನೆ.